KACD510029882021

Presented on : 13-12-2021
Registered on : 13-12-2021
Decided on : 20-05-2026
Duration : 4 years, 5 months, 7 days

## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.

**ದಿನಾಂಕಃ 20 ನೇ ಮೇ ಮಾಹೆ, 2026 ನೇ ಇಸವಿ**

**: ಉಪಸ್ಥಿತರು :**

ಶ್ರೀ ಪ್ರಸನ್ನ ಕುಮಾರ್ ಸಿ., ಬಿ.ಎ.ಎಲ್. ಎಲ್ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,
ಹೊಸದುರ್ಗ

**ಕ್ರಿಮಿನಲ್ ಮಿಸ್ ಸಂಖ್ಯೆಃ 405/2021**

1. ಶ್ರೀಮತಿ ತನುಜ ಆರ್ ಗಂಡ ಗಂಗಪ್ಪ,
ಸುಮಾರು 27 ವರ್ಷ,
ಗೃಹಿಣಿ

2. ಪ್ರಾರ್ಥನ ತಂದೆ ಗಂಗಪ್ಪ,
ಸುಮಾರು 08 ವರ್ಷ,
ವಿದ್ಯಾರ್ಥಿನಿ

2 ಅರ್ಜಿದಾರರು ಅಲ್ಪವಯಸ್ಕಳಾಗಿದ್ದು
ಅವರ ಪರ ಗಾರ್ಡಿಯನ್ ಆಗಿ ಅವರ
ಖಾಸ ತಾಯಿ 1 ನೇ ಅರ್ಜಿದಾರರು ಇರುತ್ತಾರೆ,

ಇಬ್ಬರೂ ವಾಸ: ಮಾಡದಕೆರೆ ಗ್ರಾಮ,
ಮಾಡದಕೆರೆ ಹೋಬಳಿ,
ಹೊಸದುರ್ಗ ತಾಲ್ಲೂಕು ....ಅರ್ಜಿದಾರರು

**( ಶ್ರೀಮತಿ ಲಲಿತಾ ಎಂ. ಹಿರೇಮಠ್, ವಕೀಲರು ಪ್ರತಿನಿಧಿಸಿರುತ್ತಾರೆ.)**

**ವಿರುದ್ಧ**

ಗಂಗಪ್ಪ ತಂದೆ ಕಲ್ಲೀರಪ್ಪ,
ಸುಮಾರು 45 ವರ್ಷ,
ಜಿರಾಯ್ತುದಾರರು
ವಾಸ: ಮಾಡದಕೆರೆ ಗ್ರಾಮ,
ಮಾಡದಕೆರೆ ಹೋಬಳಿ,
ಹೊಸದುರ್ಗ ತಾಲ್ಲೂಕು

..... ಎದುರುದಾರರು

**( ಶ್ರೀ ಈರಣ್ಣ ಪಿ ವಕೀಲರು ಪ್ರತಿನಿಧಿಸಿರುತ್ತಾರೆ.)**

**:: ದಂಡ ಪ್ರಕ್ರಿಯಾ ಸಂಹಿತೆ ಕಲಂ . 125 ರಡಿ ಸಲ್ಲಿಸಿದ ಅರ್ಜಿಯ ಮೇಲೆ ಆದೇಶ ::**

ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 125 ರಡಿ ಅರ್ಜಿಯನ್ನು ಸಲ್ಲಿಸಿ, ಅರ್ಜಿದಾರರಿಗೆ ಜೀವನ ನಿರ್ವಹಣೆಗೆ, ಊಟ, ವಸತಿ, ಔಷದೋಪಚಾರಕ್ಕೆ ಹಾಗೂ 2 ನೇ ಅರ್ಜಿದಾರರ ವಿದ್ಯಾಭ್ಯಾಸಕ್ಕಾಗಿ ಮಾಸಿಕ ರೂ 20,000/- ಗಳನ್ನು ಜೀವನಾಂಶವಾಗಿ ಮತ್ತು ನಷ್ಟ ಪರಿಹಾರವಾಗಿ ರೂ.10,000/- ಗಳನ್ನು ಕೊಡುವಂತೆ ಎದುರುದಾರರಿಗೆ ಆದೇಶ ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳುವುದೇನೆಂದರೆ, 1 ನೇ ಅರ್ಜಿದಾರರು ಎದುರುದಾರರ ಧರ್ಮಪತ್ನಿಯಾಗಿದ್ದು, ಸದರಿಯವರ ವಿವಾಹವು ಹಿಂದೂ ಧರ್ಮ ಶಾಸ್ತ್ರ ವಿಧಿ ಪ್ರಕಾರ ಅವರ ಕುಲಪದ್ಧತಿಯಂತೆ ಸುಮಾರು 10 ವರ್ಷಗಳ ಹಿಂದೆ ಹೊಸದುರ್ಗ ತಾಲ್ಲೂಕು, ಮಾಡದಕೆರೆ ಹೋಬಳಿಯಲ್ಲಿರುವ ಶ್ರೀ ಹಾಲುರಾಮೇಶ್ವರ ಪುಣ್ಯ ಕ್ಷೇತ್ರ ದಲ್ಲಿ ಹಿರಿಯರ, ಬಂಧುಗಳ ಮತ್ತು ಸ್ನೇಹಿತರ ಸಮಕ್ಷಮ ನೇರವೇರಿರುತ್ತದೆ. ವಿವಾಹದ ನಂತರ ಸುಮಾರು 8 ವರ್ಷಗಳ ಕಾಲ ದಾಂಪತ್ಯ ಜೀವನವನ್ನು ನಡೆಸಿದ್ದು, ಸದರಿ ದಾಂಪತ್ಯ ಜೀವನದಿಂದ 2 ನೇ ಅರ್ಜಿದಾರರು ಜನಿಸಿರುತ್ತಾರೆ. ವಿವಾಹದ ಕೆಲವು ದಿನಗಳ ನಂತರ ಎದುರುದಾರರು 1 ನೇ ಅರ್ಜಿದಾರರೊಂದಿಗೆ ಸಣ್ಣ ಪುಟ್ಟ ವಿಚಾರಗಳಿಗೂ ಜಗಳ ಮಾಡಿರುತ್ತಾರೆ. ವಿನಾಃ ಕಾರಣ 1 ನೇ ಅರ್ಜಿದಾರರ ಬಗ್ಗೆ ಅನುಮಾನ ಪಡುವುದನ್ನು ಮಾಡಿರುತ್ತಾರೆ. ಎದುರುದಾರರು 1 ನೇ ಅರ್ಜಿದಾರರಿಗಿಂತ ವಯಸ್ಸಿನಲ್ಲಿ 18 ವರ್ಷ ದೊಡ್ಡವರಿದ್ದು, 1 ನೇ ಅರ್ಜಿದಾರರ

ಸಂಬಂಧಿಯಾಗಿರುತ್ತಾರೆ. ಸದರಿ ವಿವಾಹಕ್ಕೆ 1ನೇ ಅರ್ಜಿದಾರರ ಒಪ್ಪಿಗೆ ಇಲ್ಲದಿದ್ದರೂ ಸಹ ಬಲವಂತವಾಗಿ ವಿವಾಹವನ್ನು ಎದುರುದಾರರು ಮಾಡಿಕೊಂಡಿರುತ್ತಾರೆ.

3. ಅರ್ಜಿದಾರರು ಮುಂದುವರೆದು ತಮ್ಮ ಅರ್ಜಿಯಲ್ಲಿ ಹೇಳುವುದೇನೆಂದರೆ, ಕೆಲವೊಮ್ಮೆ ಎದುರುದಾರರು ಪಾನಮತ್ತರಾಗಿ ಬಂದು 1ನೇ ಅರ್ಜಿದಾರರಿಗೆ ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕವಾಗಿ ನಿಂದಿಸಿರುತ್ತಾರೆ ಹಾಗೂ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆಯನ್ನು ನೀಡುತ್ತಾರೆ. ಇದಕ್ಕೆ 1ನೇ ಅರ್ಜಿದಾರರ ಮಾವನಾದ ಈರಣ್ಣಗೌಡ, ಮೈದುನರಾದ ಯೋಗೇಶ್ವರ್ ಮತ್ತು ನರಸಿಂಹ ಮತ್ತು ನಾದಿನಿ ಗಂಡ ವಿಜಯಪ್ಪ ಇವರು ಸಹ ವಿವಾಹವಾದಾಗಿನಿಂದ ಇಲ್ಲ ಸಲ್ಲದ ಚಾಡಿ ಮಾತು ಹೇಳಿಕೊಟ್ಟು 1ನೇ ಅರ್ಜಿದಾರರೊಂದಿಗೆ ಜಗಳ ಮಾಡುವಂತೆ ಎದುರುದಾರರಿಗೆ ಕುಮ್ಮಕ್ಕು ನೀಡಿರುತ್ತಾರೆ. 1ನೇ ಅರ್ಜಿದಾರರು ಆಗಾಗ ಗ್ರಾಮಸ್ಥರ ಮುಂದೆ ಪಂಚಾಯ್ತಿ ಮಾಡಿ, ಅವರ ಮುಂದೆ 1ನೇ ಅರ್ಜಿದಾರರಿಗೆ ಎದುರುದಾರರು ಬೈಯ್ಯುವುದು, ಅವಮಾನಿಸುವುದನ್ನು ಮಾಡಿದ್ದರಿಂದ 1ನೇ ಅರ್ಜಿದಾರರು ಮಾನಸಿಕವಾಗಿ ಕುಗ್ಗಿ ಹೋಗಿರುತ್ತಾರೆ. ಎದುರುದಾರರು ಅರ್ಜಿದಾರರಿಗೆ ಜೀವನಾವಶ್ಯಕ ವಸ್ತುಗಳನ್ನು ತಂದು ಕೊಟ್ಟಿರುವುದಿಲ್ಲ. ಹೀಗಿದ್ದರೂ ಸಹ 1ನೇ ಅರ್ಜಿದಾರರು ಕೂಲಿ ಮಾಡಿಕೊಂಡು 2ನೇ ಅರ್ಜಿದಾರರ ವಿದ್ಯಾಭ್ಯಾಸ ಮಾಡುತ್ತಾ ಜೀವನ ನಡೆಸುತ್ತಾರೆ.

4. ಅರ್ಜಿದಾರರು ಮುಂದುವರೆದು ತಮ್ಮ ಅರ್ಜಿಯಲ್ಲಿ ಹೇಳುವುದೇನೆಂದರೆ, ಎದುರುದಾರರು 1ನೇ ಅರ್ಜಿದಾರರು ಕೂಲಿ ಮಾಡಿದ ಹಣವನ್ನು ಕೊಡುವಂತೆ ಪ್ರತಿ ದಿನ ಪೀಡಿಸುತ್ತಾ 1ನೇ ಅರ್ಜಿದಾರರ ಮೇಲೆ ದೈಹಿಕ ಹಿಂಸೆಯನ್ನು ಮಾಡುತ್ತಾರೆ. 1ನೇ ಅರ್ಜಿದಾರಳು ಕೂಲಿ ಮಾಡಿ ಉಳಿಸಿದ ರೂ. 5,000=00 ಗಳನ್ನು ಮತ್ತು 1ನೇ ಅರ್ಜಿದಾರರ ಎರಡು ಚಿನ್ನದ ಓಲೆಗಳನ್ನು (12 ಗ್ರಾಂ) ಎದುರುದಾರರು ಒಂದು ತಿಂಗಳ ನಂತರ ವಾಪಸ್ಸು ಕೊಡುತ್ತೇನೆ ಎಂದು ಹೇಳಿ ಪಡೆದುಕೊಂಡು ತನ್ನ ತಂಗಿಯ ಗಂಡನಾದ

ವಿಜಯಪ್ಪ ಇವರಿಗೆ ಕೊಟ್ಟಿರುತ್ತಾರೆ. ನಂತರ 1 ನೇ ಅರ್ಜಿದಾರಳು ಎದುರುದಾರ ಮತ್ತು ವಿಜಯಪ್ಪ ಇವರನ್ನು ಹಣ ಮತ್ತು ಒಡವೆಗಳನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಹಣ ಒಡವೆಗಳನ್ನು ವಾಪಸ್ಸು ನೀಡದೆ ಇಲ್ಲ-ಸಲ್ಲದ ಆರೋಪ ಮಾಡಿ ಹಣ, ಒಡವೆಯನ್ನು ನೀಡಲು ನಿರಾಕರಿಸುತ್ತಾರೆ. ಎದುರುದಾರರು ಮತ್ತು 1 ನೇ ಅರ್ಜಿದಾರರ ಮಾವನಾದ ಈರಣ್ಣಗೌಡ, ಎದುರುದಾರರ ತಮ್ಮಂದಿರಾದ ಯೋಗೇಶ್ವರ್, ನರಸಿಂಹ ಇವರುಗಳು ದಿನಾಂಕ 02.09.2021 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಮಾಡದಕೆರೆ ಗ್ರಾಮದಲ್ಲಿರುವ 1 ನೇ ಅರ್ಜಿದಾರರ ಮೇಲೆ ವಿನಾ ಕಾರಣ ಜಗಳ ತೆಗೆದು, 1 ನೇ ಅರ್ಜಿದಾರರ ಮೇಲೆ ದೈಹಿಕವಾಗಿ ಹಿಂಸೆ ನೀಡಿ, ಅರ್ಜಿದಾರಳನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ. 1 ನೇ ಅರ್ಜಿದಾರರ ಮೇಲೆ ಹಲ್ಲೆ ಮಾಡಿದ್ದರಿಂದ 1 ನೇ ಅರ್ಜಿದಾರರ ಕೈ-ಕಾಲು ಹಾಗೂ ತಲೆಗೆ ತುಂಬಾ ಪೆಟ್ಟಾಗಿದ್ದರಿಂದ ಹೊಸದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.

5. ಅರ್ಜಿದಾರರು ಮುಂದುವರೆದು ತಮ್ಮ ಅರ್ಜಿಯಲ್ಲಿ ಹೇಳುವುದೇನೆಂದರೆ, ಅರ್ಜಿದಾರರು ಸುಮಾರು 2 ವರ್ಷಗಳಿಂದ ಮಾಡದಕೆರೆ ಗ್ರಾಮದಲ್ಲಿ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದು, 1 ನೇ ಅರ್ಜಿದಾರರು ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿರುತ್ತಾರೆ. ಅರ್ಜಿದಾರರ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿದ್ದು, 1 ನೇ ಅರ್ಜಿದಾರರಿಗೆ ತಂದೆ-ತಾಯಿ ಇಬ್ಬರೂ ಇರುವುದಿಲ್ಲ, ಎದುರುದಾರರು ಸ್ಥಿತಿವಂತರಾಗಿದ್ದು, 3 ಎಕರೆ ಜಮೀನು ಇದ್ದು, ಸ್ವಂತ ಮನೆ ಇರುತ್ತದೆ. ಪ್ರತಿವರ್ಷ ಜಮೀನಿನಲ್ಲಿ ಹತ್ತಿ ಬೆಳೆ ಬೆಳೆಯುತ್ತಿದ್ದು, ಸದರಿ ಬೆಳೆಯಿಂದ ವರ್ಷಕ್ಕೆ 5 ಲಕ್ಷ ಆದಾಯವಿರುತ್ತದೆ ಹಾಗೂ ಉತ್ತಮ ಜೀವನ ನಡೆಸುತ್ತಿರುತ್ತಾರೆ. ಎದುರುದಾರರು 1 ನೇ ಅರ್ಜಿದಾರರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದ ಬಗ್ಗೆ ದಿನಾಂಕ 02.09.2021 ರಲ್ಲಿ ಸಂರಕ್ಷಣಾಧಿಕಾರಿಗಳು ಮತ್ತು ಮಹಿಳಾ ಸಂತ್ವಾನ ಕೇಂದ್ರ ಹೊಸದುರ್ಗ ದಲ್ಲಿ ದೂರು ಸಲ್ಲಿಸಿದ್ದು, ಸದರಿ ದೂರಿನ ಅನ್ವಯ ಎದುರುದಾರರನ್ನು ಕರೆಯಿಸಿ ಬುದ್ಧಿ ಹೇಳಲು ಎದುರುದಾರರಿಗೆ ಸುಮಾರು 2 ಬಾರಿ ನೋಟೀಸ್ ನೀಡಿದ್ದರೂ ಎದುರುದಾರರು ಕಛೇರಿಗೆ ಹಾಜರಾಗಿರುವುದಿಲ್ಲ. ಆದ್ದರಿಂದ ಅರ್ಜಿದಾರು ಈ

ಅರ್ಜಿಯನ್ನು ಸಲ್ಲಿಸಿ ತಮ್ಮ ಜೀವನ ನಿರ್ವಹಣೆಗೆ, ಊಟ, ವಸತಿ, ಔಷಧೋಪಚಾರಕ್ಕೆ ಹಾಗೂ 2 ನೇ ಅರ್ಜಿದಾರರ ವಿದ್ಯಾಭ್ಯಾಸಕ್ಕೆ ರೂ.20,000/- ಗಳನ್ನು ಜೀವನಾಂಶವಾಗಿ ಮತ್ತು ನಷ್ಟ ಪರಿಹಾರವಾಗಿ ರೂ.10,000/- ಗಳನ್ನು ನೀಡಬೇಕಾಗಿ ಆದೇಶ ಮಾಡುವಂತೆ ನ್ಯಾಯಾಲಯದ ಮುಂದೆ ಪ್ರಾರ್ಥಿಸಿರುತ್ತಾರೆ.

6. ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ನೋಂದಣಿ ಮಾಡಿಕೊಂಡು ಎದುರುದಾರರಿಗೆ ನೋಟೀಸು ನೀಡಿದ್ದು, ಅದಕ್ಕೆ ಪ್ರತಿಯಾಗಿ ಎದುರುದಾರರು ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ಪರವಾಗಿ ತಕರಾರನ್ನು ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ತಕರಾರಿನಲ್ಲಿ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳಿರುವಂತೆ 1 ನೇ ಅರ್ಜಿದಾರರು ಹಾಗೂ ಎದುರುದಾರರ ನಡುವೆ ವಿವಾಹವಾದ ಬಗ್ಗೆ ಹಾಗೂ ಅವರ ದಾಂಪತ್ಯ ಫಲವಾಗಿ 2 ನೇ ಅರ್ಜಿದಾರರು ಜನಿಸಿರುವ ಬಗ್ಗೆ ಒಪ್ಪಿಕೊಳ್ಳುತ್ತಾ ಉಳಿದಂತೆ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳಿರುವ ಅಂಶಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಎದುರುದಾರರು ತಮ್ಮ ತಕರಾರಿನಲ್ಲಿ ಹೇಳುವುದೇನೆಂದರೆ, ಮದುವೆಯ ಸಮಯದಲ್ಲಿ ಅರ್ಜಿದಾರರಿಗೆ ಒಂದು ತಲಾ ಬಂಗಾರದ ಕಿವಿ ಹ್ಯಾಂಗಿನ್ಸ್, ಬೆಂಡೆ ಓಲೆ, ಸುಮಾರು 8 ಸಾವಿರ ರೂಪಾಯಿ ಕಾಲು ಚೈನುಗಳನ್ನು ಎದುರುದಾರರ ಅಣ್ಣನಾದ ಈರನಾಗಪ್ಪ ರವರು ಕೊಡಿಸಿ, ವಿವಾಹವನ್ನು ಎದುರುದಾರರೇ ಖರ್ಚು ಮಾಡಿ ವಿವಾಹ ಮಾಡಿಕೊಂಡಿರುತ್ತಾರೆ. 1 ನೇ ಅರ್ಜಿದಾರರಿಗೆ ತಂದೆ ತಾಯಿ ಇರುವುದಿಲ್ಲ, 1 ನೇ ಅರ್ಜಿದಾರರ ತಾಯಿ ಚಂದ್ರಮ್ಮ ರವರು ತನ್ನ ಗಂಡನನ್ನು ಬಿಟ್ಟು ತವರು ಮನೆಗೆ ಬಂದು ಸೇರಿಕೊಂಡಿದ್ದು, 2013 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ. ನಂತರ 1 ನೇ ಅರ್ಜಿದಾರರ ದೊಡ್ಡ ಸೋದರ ಮಾವನಾದ ಈರನಾಗಪ್ಪರವರು 1 ನೇ ಅರ್ಜಿದಾರರನ್ನು ಮತ್ತು ಆಕೆಯ ಅಕ್ಕನಾದ ಪ್ರಮೀಳಾ ಇಬ್ಬರನ್ನು ಸಾಕಿ ಇಬ್ಬರಿಗೂ ಸಹ ಮದುವೆ ಮಾಡಿಸಿರುತ್ತಾರೆ.

7. ಎದುರುದಾರರು ಮುಂದುವರೆದು ತಮ್ಮ ತಕರಾರಿನಲ್ಲಿ ಹೇಳುವುದೇನೆಂದರೆ, 1 ನೇ ಅರ್ಜಿದಾರರನ್ನು ಸದರಿ ಈರನಾಗಪ್ಪ ರವರ ತಮ್ಮನಾದ ಎದುರುದಾರರೊಂದಿಗೆ ವಿವಾಹವನ್ನು ಮಾಡಿಸಿರುತ್ತಾರೆ. ವಿವಾಹವಾದ ನಂತರ 1 ನೇ ಅರ್ಜಿದಾರರು ತನ್ನ ಒಟ್ಟು ಕುಟುಂಬದೊಂದಿಗೆ ಅನ್ಯೋನ್ಯವಾಗಿ ಸುಮಾರು 5-6 ವರ್ಷಗಳ ಚೆನ್ನಾಗಿ ಇದ್ದು, ನಂತರ ಎದುರುದಾರರಿಗೆ ವಯಸ್ಸಾಗಿದೆ ಎಂಬ ಕಾರಣಕ್ಕೆ ಒಟ್ಟು ಕುಟುಂಬದಲ್ಲಿ ಜಗಳವನ್ನು ಮಾಡಲು ಪ್ರಾರಂಭಿಸಿರುತ್ತಾರೆ. ಈಗ್ಗೆ ಸುಮಾರು ಎರಡು ವರ್ಷಗಳಿಂದ ಮಾಡದಕೆರೆ ಗ್ರಾಮದ ವಾಸಿಯಾದ ಮಲ್ಲಿಕ ಎಂಬ ಗಂಡಸಿನೊಂದಿಗೆ ಸಂಬಂಧ ಇಟ್ಟುಕೊಂಡು ಎದುರುದಾರರನ್ನು ನಿರ್ಲಕ್ಷಿಸಿರುತ್ತಾರೆ. 1 ನೇ ಅರ್ಜಿದಾರರು ತನ್ನ ಮನೆತನಕ್ಕೆ ಯಾವುದೇ ಹಣವನ್ನು ನೀಡದೆ ಸುಖಾ-ಸುಮ್ಮನೆ ರೂ. 50,000/- ಗಳ ಸಾಲವನ್ನು ಮಾಡಿ, ಎದುರುದಾರರ ಅಣ್ಣನಾದ ಈರನಾಗಪ್ಪರವರು ಮಾಡಿಸಿಕೊಟ್ಟ ಕಿವಿ ಓಲೆ ಮತ್ತು ಹ್ಯಾಂಗಿನ್ಸ್‌ಗಳನ್ನು ಅಡಮಾನ ಮಾಡಿ ಹಣವನ್ನು ಪಡೆದುಕೊಂಡಿರುತ್ತಾರೆ ಹಾಗೂ ಸದರಿ ಸಾಲವನ್ನು ಎದುರುದಾರರು ತೀರಿಸಿ ಸದರಿ ಒಡವೆಗಳನ್ನು ಬಿಡಿಸಿಕೊಟ್ಟಿರುತ್ತಾರೆ. ಅಲ್ಲದೆ 1 ನೇ ಅರ್ಜಿದಾರರ ಮತ್ತು ಎದುರುದಾರರ ವಿವಾಹದಿಂದಲೂ ಸಹ ಈರನಾಗಪ್ಪ ರವರಿಗೆ ಸೇರಿದ ಮನೆಯಲ್ಲಿ 1 ನೇ ಅರ್ಜಿದಾರರು ಮತ್ತು ಎದುರುದಾರರು ವಾಸ ಮಾಡುತ್ತಿದ್ದು, ಈಗ್ಗೆ ಎದುರುದಾರರೊಂದಿಗೆ ಸುಖಾಸುಮ್ಮನೆ ಜಗಳ ಮಾಡಿಕೊಂಡು ಎದುರುದಾರರನ್ನು ಮನೆಯಿಂದ ಹೊರ ಹಾಕಿರುತ್ತಾರೆ. ಸದರಿ ವಿಚಾರವು ಎದುರುದಾರರ ಕುಟುಂಬಕ್ಕೆ ತಿಳಿದ ನಂತರ ಎದುರುದಾರರ ಕುಟುಂಬದವರು 1 ನೇ ಅರ್ಜಿದಾರರಿಗೆ ಬುದ್ಧಿವಾದ ಹೇಳಿದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ.

8. ಎದುರುದಾರರು ಮುಂದುವರೆದು ತಮ್ಮ ತಕರಾರಿನಲ್ಲಿ ಹೇಳುವುದೇನೆಂದರೆ, ನಂತರ ಎದುರುದಾರರು ಮತ್ತು ಅವರ ಅಣ್ಣನಾದ ಈರನಾಗಪ್ಪ ರವರು 1 ನೇ ಅರ್ಜಿದಾರರು ಮಲ್ಲಿಕ ಎಂಬುವವರೊಂದಿಗೆ ಇದ್ದ ಕೆಟ್ಟ ಸಂಬಂಧದ ಬಗ್ಗೆ ಊರಿನಲ್ಲಿ ಪಂಚಾಯಿ ಮಾಡಿ, ಪಂಚಾಯ್ತಿದಾರರು 1 ನೇ ಅರ್ಜಿದಾರರನ್ನು

ವಿಚಾರಿಸಿದಾಗ ಒಂದನೇ ಅರ್ಜಿದಾರಳು ನನಗೆ ಗಂಡ ಬೇಡಾ, ಮಲ್ಲಿಕ ಎಂಬುವವರೆ ಬೇಕು ಎಂದು ಹಠ ಮಾಡಿ ತನ್ನ ತೀರ್ಮಾನವನ್ನು ಪಂಚಾಯ್ತಿದಾರರ ಸಮಕ್ಷಮ ಹೇಳಿರುತ್ತಾರೆ. ಎದುರುದಾರರು ಪೂಜಾರಿ ಮನೆತನಕ್ಕೆ ಸೇರಿದವರಾಗಿದ್ದು, ಎದುರುದಾರರಿಗೆ ಯಾವುದೇ ದುಶ್ಚಟಗಳು ಇರುವುದಿಲ್ಲ ಹಾಗೂ ಎದುರುದಾರರು ಯಾವುದೇ ವ್ಯವಸಾಯವನ್ನಾಗಲೀ ಅಥವಾ ಕೆಲಸವನ್ನಾಗಲೀ ಮಾಡುತ್ತಿರುವುದಿಲ್ಲ. ಎದುರುದಾರರು ಜುಂಜಪ್ಪ ದೇವಸ್ಥಾನದ ಪೂಜಾರಿತನ ಮಾಡಿಕೊಂಡು ಬಂದಿರುತ್ತಾರೆ, ಎದುರುದಾರರಿಗೆ ಯಾವುದೇ ಪ್ರತ್ಯೇಕವಾದ ಜಮೀನು ಇರುವುದಿಲ್ಲ. ಅರ್ಜಿದಾರರು ಇರುವಂತಹ ಮನೆಯು ಈರನಾಗಪ್ಪ ರವರಿಗೆ ಸೇರಿದ ಮನೆಯಾಗಿರುತ್ತದೆ. 1 ನೇ ಅರ್ಜಿದಾರರ ತಂದೆಯಾದ ರಂಗಪ್ಪ ರವರಿಗೆ ಸೇರಿದ ಜಮೀನು ಸುಮಾರು 8 ಎಕರೆ ಇದ್ದು, 1 ನೇ ಅರ್ಜಿದಾರರು ಸದರಿ ಜಮೀನುಗಳಲ್ಲಿ ಪಾಲು ವಿಭಾಗವನ್ನು ಕೇಳದೆ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ ಆದ್ದರಿಂದ ಸದರಿ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

9. ಅರ್ಜಿದಾರರು ಸಲ್ಲಿಸಿರುವ ಅರ್ಜಿ ಹಾಗೂ ಎದುರುದಾರರ ತಕರಾರನ್ನು ಆಧರಿಸಿ ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ಈ ನ್ಯಾಯಾಲಯವು ರೂಪಿಸಿರುತ್ತದೆ.

1. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿರುವಂತೆ ಪರಿಹಾರವನ್ನು ಪಡೆಯಲು ಅರ್ಹರಿರುತ್ತಾರೆಯೇ?
2. ಯಾವ ಆದೇಶ?

10. ನಂತರ ಪ್ರಕರಣವನ್ನು ವಿಚಾರಣೆಗಾಗಿ ಕೈಗೆತ್ತಿಕೊಳ್ಳಲಾಗಿದ್ದು, 1 ನೇ ಅರ್ಜಿದಾರರರು ಪಿಡಬ್ಲ್ಯೂ-1 ರಂತೆ ವಿಚಾರಣೆಗೊಳಪಟ್ಟಿರುತ್ತಾರೆ ಹಾಗೂ ತಮ್ಮ ಪರವಾಗಿ 5 ದಾಖಲಾತಿಗಳನ್ನು ನಿಪಿ-1 ರಿಂದ ನಿಪಿ-5 ರಂತೆ ನಿಶಾನೆಗೆ ಗುರುತಿಸಿಕೊಂಡು, ನಂತರ ತಮ್ಮ ಪರವಾಗಿ ವಿಚಾರಣೆಯನ್ನು

ಮುಕ್ತಾಯಗೊಳಿಸಿಕೊಂಡಿರುತ್ತಾರೆ. ಇದಕ್ಕೆ ಪ್ರತಿಯಾಗಿ ಎದುರುದಾರರು ಆರ್.ಡಬ್ಲ್ಯೂ-1 ರಂತೆ ವಿಚಾರಣೆಗೊಳಪಟ್ಟಿರುತ್ತಾರೆ. ಎದುರುದಾರರು ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ ಹಾಗೂ ತಮ್ಮ ಪರವಾಗಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ. ಅಲ್ಲದೇ ಉಭಯ ಪಕ್ಷಗಾರರ ಪರ ವಕೀಲರು, ವಿಚಾರಣೆಗೊಳಪಟ್ಟ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ.

11. ವಾದವನ್ನು ಆಲಿಸಲಾಯಿತು. ಅರ್ಜಿದಾರರು ಸಲ್ಲಿರುವ ಅರ್ಜಿ, ಎದುರುದಾರರ ತಕರಾರು ಹಾಗೂ ಅರ್ಜಿದಾರರು ಮತ್ತು ಎದುರುದಾರರು ಹಾಜರುಪಡಿಸಿರುವ ಸಾಕ್ಷ್ಯಾಧಾರ ಮತ್ತು ದಾಖಲೆಗಳನ್ನು ಪರಿಗಣಿಸಿ ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತದೆ.

| | |
|---|---|
| ಅಂಶ-1 | : ಭಾಗಶ: ಸಕಾರಾತ್ಮಕವಾಗಿ |
| ಅಂಶ-2 | : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗೋಸ್ಕರ |

:**ಕಾರಣಗಳು**:

12. **ಅಂಶ ಸಂಖ್ಯೆ** 1:- ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 125 ರಡಿ ಅರ್ಜಿಯನ್ನು ಸಲ್ಲಿಸಿ, ಅರ್ಜಿದಾರರಿಗೆ ಜೀವನ ನಿರ್ವಹಣೆಗೆ, ಊಟ, ವಸತಿ, ಔಷದೋಪಚಾರಕ್ಕೆ ಹಾಗೂ 2 ನೇ ಅರ್ಜಿದಾರರ ವಿದ್ಯಾಭ್ಯಾಸಕ್ಕಾಗಿ ಮಾಸಿಕ ರೂ 20,000/- ಗಳನ್ನು ಜೀವನಾಂಶವಾಗಿ ಮತ್ತು ನಷ್ಟ ಪರಿಹಾರವಾಗಿ ರೂ.10,000/- ಗಳನ್ನು ಕೊಡುವಂತೆ ಎದುರುದಾರರಿಗೆ ಆದೇಶ ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ.

13. ಅರ್ಜಿದಾರರು ತಮ್ಮ ಅರ್ಜಿಯಲ್ಲಿನ ವಿಷಯಗಳನ್ನು ರುಜುವಾತುಪಡಿಸುವ ಸಲುವಾಗಿ 1 ನೇ ಅರ್ಜಿದಾರರು ತನ್ನನ್ನೇ ಅರ್ಜಿದಾರರ ಪರ ಸಾಕ್ಷಿಯಾಗಿ ಪಿಡಬ್ಲ್ಯೂ-1 ರಂತೆ ವಿಚಾರಣೆಗೆ ಒಳಪಡಿಸಿಕೊಂಡು, ತಮ್ಮ ಪರವಾಗಿ 5 ದಾಖಲೆಗಳನ್ನು ನಿಪಿ-1 ರಿಂದ 5 ರಂತೆ ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ. ನಿಪಿ.1 ಎರಡನೇ ಅರ್ಜಿದಾರರ ಆಧಾರ ಗುರುತಿನ

ಪತ್ರದ ನೋಟರಿ ಪ್ರತಿ, ನಿಪಿ-2 ಒಂದನೇ ಅರ್ಜಿದಾರರ ಆಧಾರ ಗುರುತಿನ ಪತ್ರದ ನೋಟರಿ ಪ್ರತಿ, ನಿಪಿ-3 ಎದುರುದಾರರ ಆಧಾರ ಗುರುತಿನ ಪತ್ರದ ನೋಟರಿ ಪ್ರತಿ, ನಿಪಿ-4 ಪಡಿತರ ಚೀಟಿಯ ನೋಟರಿ ಪ್ರತಿ, ನಿಪಿ-5 ಒಂದನೇ ಅರ್ಜಿದಾರರ ಚುನಾವಣಾ ಗುರುತಿನ ಚೀಟಿಯ ನೋಟರಿ ಪ್ರತಿ.

14. ಮೊದಲಿಗೆ 2 ನೇ ಅರ್ಜಿದಾರರು ಎದುರುದಾರರ ಮಗಳು ಹಾಗೂ 1 ನೇ ಅರ್ಜಿದಾರರು ಎದುರುದಾರರ ಕಾನೂನು ಬದ್ದ ಪತ್ನಿ ಎಂಬ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಎದುರುದಾರರು ಸದರಿ ಅಂಶವನ್ನು ಸ್ಪಷ್ಟವಾಗಿ ತಮ್ಮ ತಕರಾರಿನಲ್ಲಿಯೂ ಹಾಗೂ ಆರ್ ಡಬ್ಲ್ಯೂ-1 ಆಗಿ ತಮ್ಮ ಮುಖ್ಯ ವಿಚಾರಣೆ ಸಮಯದಲ್ಲಿಯೂ ಸಹ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಒಪ್ಪಿಕೊಂಡ ಅಂಶದ ಬಗ್ಗೆ ಹೆಚ್ಚಿನ ವಿಮರ್ಶೆಯ ಅಗತ್ಯತೆ ಇರುವುದಿಲ್ಲ. ಇಲ್ಲಿ ವಿವಾದ ಇರುವುದು ಎದುರುದಾರರು ಅರ್ಜಿದಾರರನ್ನು ನೋಡಿಕೊಳ್ಳದೇ ನಿರ್ಲಕ್ಷಿಸಿರುವ ಬಗ್ಗೆ ಇರುತ್ತದೆ. ಈ ಕುರಿತು ಅರ್ಜಿದಾರರಿಗೆ ಅವರ ಜೀವನ ನಿರ್ವಹಣೆಗಾಗಿ ಮಾಸಿಕ ರೂ.20,000-00 ಗಳ ಹಣಕಾಸಿನ ನೆರವನ್ನು ಎದುರುದಾರರು ಕೊಡಿಸುವಂತೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.125 ರಡಿಯಲ್ಲಿ ನ್ಯಾಯಾಲಯದ ಮೊರೆ ಬಂದಿರುತ್ತಾರೆ. ಈ ಸಂದರ್ಭದಲ್ಲಿ ಅರ್ಜಿದಾರರು ಪಿಡಬ್ಲೂ-1 ರಂತೆ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯುತ್ತಾ, ಅರ್ಜಿಯಲ್ಲಿ ಹೇಳಿರುವ ಅಂಶಗಳನ್ನು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುತ್ತಾರೆ.

15. ಮುಂದುವರೆದು ಪಿಡಬ್ಲ್ಯೂ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಎದುರುದಾರರು ತನಗಿಂದ 18 ವರ್ಷ ದೊಡ್ಡವರಿದ್ದು ತನ್ನ ಸಂಬಂಧಿಯಾಗಿರುತ್ತಾರೆಂದು, ವಿವಾಹಕ್ಕೆ ತನ್ನ ಒಪ್ಪಿಗೆ ಇಲ್ಲದಿದ್ದರೂ ಸಹಾ ಬಲವಂತವಾಗಿ ವಿವಾಹವನ್ನು ಮಾಡಿಕೊಂಡಿರುತ್ತಾರೆಂದು ಹಾಗೂ ವಿವಾಹವಾದ ಕೆಲವು ದಿನಗಳ ನಂತರ ಎದುರುದಾರರು ಸಣ್ಣ ವಿಚಾರಕ್ಕೂ ಜಗಳ ಮಾಡುವುದು, ವಿನಾಃ ಕಾರಣ ತನ್ನ ಮೇಲೆ ಅನುಮಾನ ಪಡುವುದು ಮಾಡಿರುತ್ತಾರೆಂದು ಕೆಲವೊಮ್ಮೆ ಪಾನಮತ್ತನಾಗಿ ಬಂದು ಅವಾಚ್ಯ ಶಬ್ದಗಳಿಂದ ಬೈದು ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆಯನ್ನು

ನೀಡಿರುತ್ತಾರೆ ಹಾಗೂ ಇದಕ್ಕೆ ತನ್ನ ಮಾವನಾದ ಈರನಾಗಪ್ಪ, ಮೈದುನರಾದ ಯೋಗೇಶ್ವರ ಮತ್ತು ನರಸಿಂಹ ಮತ್ತು ನಾದಿನಿ ಗಂಡ ವಿಜಯಪ್ಪರವರು ಕುಮ್ಮಕ್ಕು ನೀಡಿರುತ್ತಾರೆಂದು ನುಡಿಯುತ್ತಾರೆ ಎಂಬ ಬಗ್ಗೆ ಕಠಿಣ ಆರೋಪ ಮಾಡಿರುತ್ತಾರೆ. ಸದರಿ ಆರೋಪವನ್ನು ಎದುರುದಾರರು ನಿರಾಕರಿಸಿರುತ್ತಾರೆ ಹಾಗೂ ಎದುರುದಾರರು ಆರ್.ಡಬ್ಲ್ಯೂ-1 ಎಂದು ಗುರುತಿಸಿಕೊಂಡು ತಮ್ಮ ತಕಾರಾರಿನಲ್ಲಿ ಅರ್ಜಿದಾರರ ಆರೋಪವನ್ನು ಅಲ್ಲಗಳೆದಿರುತ್ತಾರೆ ಹಾಗೂ ತಾನು 1 ನೇ ಅರ್ಜಿದಾರರ ತಾಯಿಯ ತಮ್ಮನೆಂದು, 1 ನೇ ಅರ್ಜಿದಾರರ ತಾಯಿಯು ಗಂಡನನ್ನು ಬಿಟ್ಟು ತವರು ಮನೆಗೆ ಬಂದು 2013 ನೇ ಸಾಲಿನಲ್ಲಿ ಮರಣ ಹೊಂದಿದ್ದು, ಅವರ ಮರಣಾ ನಂತರ 1 ನೇ ಅರ್ಜಿದಾರರನ್ನು ಎದುರುದಾರರ ಅಣ್ಣನೆ ನೋಡಿಕೊಂಡು ಎದುರುದಾರರಿಗೆ ಮದುವೆ ಮಾಡಿಕೊಂಡಿರುವುದಾಗಿ ಹಾಗೂ ಅರ್ಜಿದಾರರು ತನಗೆ ವಯಸ್ಸಾಗಿದೆ ಎಂಬ ಕಾರಣಕ್ಕೆ ಕುಟುಂಬದಲ್ಲಿ ಜಗಳ ಮಾಡಲು ಪ್ರಾರಂಭಿಸಿರುತ್ತಾರೆಂದು, ಹಾಗೂ ಮಾಡದಕೆರೆ ಗ್ರಾಮದ ವಾಸಿಯಾದ ಮಲ್ಲಿಕ ಎಂಬ ಗಂಡಸಿನೊಂದಿಗೆ ಸಂಬಂದ ಇಟ್ಟುಕೊಂಡು ತನ್ನನ್ನು ನಿರ್ಲಕ್ಷಿಸಿರುತ್ತಿರುತ್ತಾರೆಂದು, ಸದರಿ ಮಲ್ಲಿಕ ಎಂಬುವವರೊಂದಿಗೆ ಇದ್ದ ಕೆಟ್ಟ ಸಂಬಂಧದ ಬಗ್ಗೆ ಊರಿನಲ್ಲಿ ಪಂಚಾಯಿತಿ ಮಾಡಿದ್ದು ಅರ್ಜಿದಾರರನ್ನು ವಿಚಾರಿಸಿದಾಗ 1 ನೇ ಅರ್ಜಿದಾರರು ಗಂಡ ಬೇಡಾ ಮಲ್ಲಿಕ ಬೇಕು ಎಂದು ಹಠ ಮಾಡಿರುತ್ತಾರೆಂದು ಹಾಗೂ ತಮ್ಮ ಪಾಟೀ ಸವಾಲಿನ ಸಮಯದಲ್ಲಿ 1 ನೇ ಅರ್ಜಿದಾರರ ಮತ್ತು ಸದರಿ ಮಲ್ಲಿಕಾ ರವರು ಒಟ್ಟಾಗಿ ದೊರೆತ ಕಾರಣ ಬುದ್ದಿವಾದ ಹೇಳಲು ಹಲ್ಲೆ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಹಾಗೂ ಜೊತೆಯಾಗಿ ಇರಲು ಹಲವು ಬಾರಿ ಕರೆದರೂ ಅರ್ಜಿದಾರರು ಬೇರೆಯವರ ಜೊತೆ ವಾಸಿಸುವ ಸಲುವಾಗಿ ತನ್ನ ಜೊತೆ ಬಂದಿರುವುದಿಲ್ಲವೆಂದು ನುಡಿಯುತ್ತಾರೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಎದುರುದಾರರು ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದ ಬಗ್ಗೆ ದಿನಾಂಕ 02.09.2021 ರಂದು ಸಂರಕ್ಷಣಾಧಿಕಾರಿಗಳು ಮತ್ತು ಮಹಿಳಾ ಸಾಂತ್ವಾನ ಕೇಂದ್ರ, ಹೊಸದುರ್ಗದಲ್ಲಿ ದೂರು ನೀಡಿರುವುದಾಗಿ ಹಾಗೂ ಸದರಿ ದೂರಿನನ್ವಯ ಎದುರುದಾರರನ್ನು ಕರೆಯಿಸಿ ಬುದ್ದಿ ಹೇಳಲು ಎದುರುದಾರರಿಗೆ 2 ಬಾರಿ ನೋಟೀಸ್ ನೀಡಿದ್ದರೂ ಸಹಾ ಎದುರುದಾರರು ಕಚೇರಿಗೆ

ಹಾಜರಾಗಿರುವುದಿಲ್ಲವೆಂದು ನುಡಿಯುತ್ತಾರೆ. ಆದರೆ ಅರ್ಜಿದಾರರು ದೂರು ನೀಡಿದ ಬಗ್ಗೆ ದೂರಿನ ಪ್ರತಿಯನ್ನು ಹಾಜರು ಪಡಿಸಿರುವುದಿಲ್ಲ. ಹಾಜರು ಪಡಿಸಿದ ದಾಖಲೆಗಳು ಕೇವಲ ಗುರುತಿನ ಚೀಟಿಗಳಾಗಿರುತ್ತವೆ.

16. ಎದುರುದಾರರು ಅರ್ಜಿದಾರರನ್ನು ನೋಡಿಕೊಳ್ಳದೆ ನಿರ್ಲಕ್ಷಿಸಿರುವ ಬಗ್ಗೆ ನಿರಾಕರಿಸಿದರೂ ಪ್ರಸ್ತುತ 1 ನೇ ಅರ್ಜಿದಾರರು 2 ನೇ ಅರ್ಜಿದಾರರೊಂದಿಗೆ ಬೇರೆ ಮನೆಯಲ್ಲಿ ವಾಸ ಮಾಡುತ್ತಿರುವುದಾಗಿ, ಪ್ರಸ್ತುತ 2 ನೇ ಅರ್ಜಿದಾರರ ವಿದ್ಯಾಭ್ಯಾಸದ ಖರ್ಚನ್ನು 1 ನೇ ಅರ್ಜಿದಾರರೇ ನೋಡಿಕೊಳ್ಳುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆದಕಾರಣ ಎದುರುದಾರರು ಅರ್ಜಿದಾರರನ್ನು ಸಾಕಿ ಸಲಹುವ ಜವಬ್ದಾರಿ ಹೊಂದಿರುತ್ತಾರೆ. ಮುಂದುವರೆದು, ಅರ್ಜಿದಾರರು ತಮಗೆ ತಿಂಗಳಿಗೆ ರೂ.20,000/- ಗಳ ಖರ್ಚು ವೆಚ್ಚಗಳ ಅವಶ್ಯಕತೆ ಇದ್ದು ಎದುರುದಾರರಿಗೆ ಅದನ್ನು ಕೊಡುವ ಶಕ್ತಿ ಸಹ ಇರುತ್ತದೆ ಎಂದು ನುಡಿಯುತ್ತಾರೆ. ಎದುರುದಾರರು ತಮ್ಮ ತಕರಾರಿನಲ್ಲಿ ತಾವು ಪೂಜಾರಿ ಮನೆತನಕ್ಕೆ ಸೇರಿದವರಾಗಿದ್ದು, ಯಾವುದೇ ದುಶ್ಚಟಗಳಿರುವುದಿಲ್ಲ ಹಾಗೂ ಎದುರುದಾರರು ಯಾವುದೇ ವ್ಯಸಾಯವನ್ನಾಗಲೀ ಮತ್ತು ಇತರೆ ಯಾವುದೇ ಕೆಲಸವನ್ನಾಗಲೀ ಮಾಡುತ್ತಿರುವುದಿಲ್ಲ, ಜುಂಜಪ್ಪ ದೇವಸ್ಥಾನದ ಪೂಜಾರಿತನ ಮಾಡುತ್ತಿರುವುದಾಗಿ ಹೇಳಿರುತ್ತಾರೆ ಹಾಗೂ ಪಾಟೀ ಸವಾಲಿನಲ್ಲಿ ತನಗೆ ಸೇರಿದ ಸ್ವಂತ ಮನೆ ಇದ್ದು, ತಾನು 3 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿರುವುದಾಗಿ ಅದು 1 ಅರ್ಜಿದಾರರ ಮಾವನ ಹೆಸರಿನಲ್ಲಿ ಇರುವುದಾಗಿ ನುಡಿಯುತ್ತಾರೆ. ಆದರೆ ಅರ್ಜಿದಾರರು ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದಕಾರಣ ಎದುರುದಾರರ ನಿರ್ದಿಷ್ಟ ಆದಾಯ ಎಷ್ಟು ಎಂದು ಅರ್ಜಿದಾರರು ಸಾಬೀತು ಮಾಡಿರುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಈ ಪ್ರಕರಣದಲ್ಲಿ ಅರ್ಜಿದಾರರು ಮತ್ತು ಎದುರುದಾರರ ವಿವಾಹ ಸಂಬಂಧ ಮದುವೆಯಾದ ಎಷ್ಟು ದಿನಗಳಿಗೆ ಕೊನೆಗೊಂಡಿರುತ್ತದೆ ಎಂಬುದು ಸ್ಪಷ್ಟವಾಗಿ ಕಂಡು ಬರುವುದಿಲ್ಲ. ಆದರೆ ವಿವಾಹ ಆಗಿ 10 ವರ್ಷಗಳಿಗೆ ಪಕ್ಷಗಾರರು ನ್ಯಾಯಾಲಯದ ಮೊರೆ ಬಂದಿರುವುದು ವಿಷಾದನೀಯ. ಲಭ್ಯವಿರುವ ಸಾಕ್ಷ್ಯ ವಿಚಾರಣೆಯನ್ನು ಗಮನಿಸಿದಾಗ ಆರೋಪ ಪ್ರತ್ಯಾರೋಪಗಳು ಸಾಬೀತಾಗಿರುವುದಿಲ್ಲ. ಮುಂದುವರೆದು, ಯಾವ

ನಿಖರವಾದ ಕಾರಣಗಳಿಗೆ ಅರ್ಜಿದಾರರು ಮತ್ತು ಎದುರುದಾರರು ಬೇರೆಯಾಗಿರುತ್ತಾರೆ ಎಂಬ ಬಗ್ಗೆಯೂ ಸ್ಪಷ್ಟವಾಗಿ ಕಂಡುಬರುವುದಿಲ್ಲ. ಆದರೆ ವಿನಾಃಕಾರಣ ಇಬ್ಬರೂ ಬೇರೆ ಬೇರೆ ಆಗಿರುತ್ತಾರೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದಕಾರಣ ಇಲ್ಲಿ ಯಾರು ಯಾರನ್ನು ನಿರ್ಲಕ್ಷ್ಯ ಮಾಡಿರುತ್ತಾರೆ ಎಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಮುಂದುವರೆದು ಎದುರುದಾರರ ಮಾನಸಿಕ, ದೈಹಿಕ ಹಿಂಸೆ ಬಗ್ಗೆಯಾಗಲಿ, 1 ನೇ ಅರ್ಜಿದಾರರ ಅನೈತಿಕ ಸಂಬಂಧದ ಬಗ್ಗೆಯಾಗಲೀ ಸ್ಪಷ್ಟ ನಿಲುವು ತೆಗೆದುಕೊಳ್ಳಲು ಸೂಕ್ತ ಸಾಕ್ಷ್ಯಾಧಾರಗಳು ಲಭ್ಯವಿರುವುದಿಲ್ಲ.

17. ಅಲ್ಲದೇ 1 ನೇ ಅರ್ಜಿದಾರರು ಮತ್ತು ಎದುರುದಾರರು 2 ನೇ ಅರ್ಜಿದಾರರ ಕ್ಷೇಮ ಸುಖಕ್ಕಾಗಿ ತಮ್ಮ ಆರೋಪ ಪ್ರತ್ಯಾರೋಪಗಳನ್ನು ಬದಿಗಿಟ್ಟು ಒಟ್ಟಾಗಿ ಸಾಂಸಾರಿಕ ಜೀವನ ನಡೆಸಬಹುದು ಎಂದು ನ್ಯಾಯಾಲಯವು ಅಭಿಪ್ರಾಯ ಪಟ್ಟಿರುತ್ತದೆ. ಇನ್ನೂ ಎದುರುದಾರರೆ ಒಪ್ಪಿಕೊಂಡಂತೆ ಅರ್ಜಿದಾರರು ಪ್ರತ್ಯೇಕವಾಗಿ ಬೇರೆ ಮನೆಯಲ್ಲಿ ವಾಸಿಸುತ್ತಿದ್ದು ಎದುರುದಾರರು ಅರ್ಜಿದಾರರಿಗೆ ಜೀವನಾಂಶ ಕೊಡುವ ಜವಬ್ದಾರಿ ಹೊಂದಿರುತ್ತಾರೆ. ಆದಕಾರಣ, ಈ ನ್ಯಾಯಾಲಯವು ಎದುರುದಾರರು ಅರ್ಜಿದಾರರ ಜೀವನ ನಿರ್ವಹಣೆಗೆ ಇಂತಿಷ್ಟು ಜೀವನಾಂಶ ನೀಡಬೇಕಾಗಿರುವುದು ಸಮಂಜಸವಾಗಿರುತ್ತದೆ ಎಂದು ನಿರ್ಧಾರಕ್ಕೆ ಬರುತ್ತದೆ. ಆದಕಾರಣ ಪತ್ನಿ-ಮಕ್ಕಳು ತಮ್ಮ ಜೀವನವನ್ನು ತಾವು ನಿರ್ವಹಿಸಿ ಕೊಳ್ಳಲು ತೊಂದರೆ ಅನುಭವಿಸುತ್ತಿದ್ದರೆ ಅಂತಹವರಿಗೆ ತನ್ನ ಪತಿ/ತಂದೆ ಜೀವನಾಂಶ ನೀಡವುದು ಅಗತ್ಯ ಎಂಬುದು ಕಾನೂನಿನ ವ್ಯಾಖ್ಯಾನ ಆಗಿರುತ್ತದೆ. 1 ನೇ ಅರ್ಜಿದಾರರಿಗೆ ಈಗ ಸುಮಾರು 33 ವರ್ಷ ವಯಸ್ಸಾಗಿದ್ದು ಅವರು ಎದುರುದಾರರ ಮೇಲೆ ಅವಲಂಬನೆಯಾಗದೆ ತನ್ನ ಜೀವನ ನಿರ್ವಹಣೆ ಮಾಡುವ ಶಕ್ತಿ ಇರುತ್ತದೆ ಮತ್ತು ಆಕೆಗೆ ಯಾವುದೇ ದೈಹಿಕ ನ್ಯೂನ್ಯತೆಗಳು ಇರುವುದು ಕಂಡುಬರುವುದಿಲ್ಲ ಹಾಗೂ ಪಾಟೀ ಸವಾಲಿನಲ್ಲಿ ಕೂಲಿ ಕೆಲಸ ಮಾಡಿ ದುಡಿಯುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ.

18. ಆದರೆ, ಪತಿಯು ಪತ್ನಿಯ ಜೀವನ ನಿರ್ವಹಣೆ ನೋಡಿಕೊಳ್ಳುವ ಬಾದ್ಯತೆಯಿಂದಲೂ ತಪ್ಪಿಸಿಕೊಳ್ಳುವ ಹಾಗಿಲ್ಲ. ಈ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹಲವಾರು ಪ್ರಕರಣಗಳಲ್ಲಿ ತೀರ್ಮಾನಿಸಿರುತ್ತದೆ. ಆದರೆ, ಅರ್ಜಿದಾರರು ತಿಂಗಳಿಗೆ ರೂ.20,000/- ಗಳ ಜೀವನಾಂಶ ಹಾಗೂ ನಷ್ಟ ಪರಿಹಾರವಾಗಿ ರೂ.10,000/- ಗಳನ್ನು ಕೋರಿರುವುದು ಸಮಂಜಸವಲ್ಲ. ಆದರೆ, ನ್ಯಾಯಾಲಯವು ಅರ್ಜಿದಾರರ ಇತರೆ ಖರ್ಚುಗಳ ಜೊತೆ ಅದರ ಜೊತೆ 2 ನೇ ಅರ್ಜಿದಾರರ ಶಿಕ್ಷಣ ಮತ್ತು ವಸತಿಯ ಬಗ್ಗೆಯೂ ಸಮಗ್ರವಾಗಿ ಪರಿಗಣನೆಗೆ ತೆಗೆದುಕೊಂಡು ಈ ಹಂತದಲ್ಲಿ ಅರ್ಜಿದಾರರು ಎದುರುದಾರರ ನಿರ್ದಿಷ್ಠ ಆದಾಯ ಎಷ್ಟು ಎಂದು ನ್ಯಾಯಾಲಯದ ಮುಂದೆ ದಾಖಲೆಗಳ ಮೂಲಕ ಸಾಬೀತು ಮಾಡಿರುವುದಿಲ್ಲ. ಆದರೆ ಉಭಯ ಅರ್ಜಿದಾರರ ಖರ್ಚು ವೆಚ್ಚ ಮತ್ತು 2 ನೇ ಅರ್ಜಿದಾರರ ಶಾಲಾ ವೆಚ್ಚವನ್ನು ಮನಗಂಡು ನ್ಯಾಯಾಲಯವು ಈ ಪ್ರಕರಣದಲ್ಲಿನ ಎಲ್ಲಾ ವಸ್ತುಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಂಡು ಹಾಗೂ ಎದುರುದಾರರ ಆರ್ಥಿಕ ಸ್ಥಿತಿಗತಿಯನ್ನು ಸಹ ಪರಿಗಣಿಸಿ ಹಾಗೂ 1 ನೇ ಅರ್ಜಿದಾರರು ದುಡಿಮೆ ಮಾಡುವ ಶಕ್ತಿಯನ್ನು ಪರಿಗಣಿಸಿ 1 ನೇ ಅರ್ಜಿದಾರರಿಗೆ ತಿಂಗಳಿಗೆ ರೂ.2,000/- ಹಾಗೂ 2 ನೇ ಅರ್ಜಿದಾರರಿಗೆ ತಿಂಗಳಿಗೆ ರೂ.4,000/- ರಂತೆ ಜೀವನಾಂಶ ಪರಿಹಾರವಾಗಿ ಎದುರುದಾರರು ನೀಡುವಂತೆ ಆದೇಶ ಮಾಡಿದ್ದಲ್ಲಿ ಉಭಯ ಪಕ್ಷಗಾರರಿಗೂ ನ್ಯಾಯದಾನ ಮಾಡಿದಂತೆ ಆಗುತ್ತದೆ. ಆದ್ದರಿಂದ ಎದುರುದಾರರು 1 ನೇ ಅರ್ಜಿದಾರರಿಗೆ ತಿಂಗಳಿಗೆ ರೂ.2,000/- ಹಾಗೂ 2 ನೇ ಅರ್ಜಿದಾರರಿಗೆ ತಿಂಗಳಿಗೆ ರೂ.4,000/- ಜೀವನಾಂಶ ಪರಿಹಾರವನ್ನು ನೀಡುವಂತೆ ಆದೇಶ ಮಾಡುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಅರ್ಜಿದಾರರು ಜೀವನಾಂಶವಾಗಿ ತಿಂಗಳಿಗೆ ಒಟ್ಟಾಗಿ ರೂ.6,000/- ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆ. ನಷ್ಟಪರಿಹಾರದ ಬಗ್ಗೆ ಯಾವುದೇ ಅದೇಶವಿರುವುದಿಲ್ಲ. ಆದಕಾರಣ ಮೇಲಿನ 1 ನೇ ಅಂಶವನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**19. ಅಂಶಃ 2:** ಅಂಶ-1 ರಲ್ಲಿ ವಿವರಿಸಿದ ಕಾರಣಗಳಿಂದ ಹಾಗೂ ಪ್ರಕರಣದ ವಸ್ತುಸ್ಥಿತಿ ಹಾಗೂ ಸಂಗತಿಗಳ ಆಧಾರದಿಂದ ಈ ಅಂಶವನ್ನು ಈ ಕೆಳಕಂಡ ಅಂತಿಮ ಆದೇಶದಂತೆ ಉತ್ತರಿಸಿರುತ್ತೇನೆ.

**:: ಆದೇಶ ::**

ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 125 ರಡಿ ಸಲ್ಲಿಸಿರುವ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದೆ.

ತತ್ಪರಿಣಾಮವಾಗಿ ಎದುರುದಾರರು ಅರ್ಜಿ ದಾಖಲಿಸಿದ ದಿನಾಂಕದಿಂದ 1 ನೇ ಅರ್ಜಿದಾರರಿಗೆ ತಿಂಗಳಿಗೆ ರೂ.2,000/- ಹಾಗೂ 2 ನೇ ಅರ್ಜಿದಾರರಿಗೆ ರೂ.4,000/- ಗಳಂತೆ ಒಟ್ಟು ರೂ.6,000/- ಜೀವನಾಂಶ ಹಣವಾಗಿ ನೀಡತಕ್ಕದ್ದು.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ನಂತರ ತಿದ್ದುಪಡಿಯನ್ನು ಮಾಡಿ ದಿನಾಂಕ: 20 ನೇ ಮೇ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**( ಪ್ರಸನ್ನಕುಮಾರ್ ಸಿ. )**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊಸದುರ್ಗ**

**:: ಅನುಬಂಧ ::**

**1. ಅರ್ಜಿದಾರರ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ**

ಪಿಡಬ್ಲ್ಯೂ-1 : ತನುಜ ಆರ್

**2. ಅರ್ಜಿದಾರರ ಪರ ನಿಶಾನೆಯಾಗಿ ಗುರುತಿಸಿಕೊಂಡ ದಾಖಲೆಗಳುಃ**

ನಿಪಿ-1 : 2 ನೇ ಅರ್ಜಿದಾರರ ಆಧಾರ ಗುರುತಿನ ಪತ್ರದ ನೋಟರಿ ಪ್ರತಿ

ನಿಪಿ-2 : 1 ನೇ ಅರ್ಜಿದಾರರ ಆಧಾರ ಗುರುತಿನ ಪತ್ರದ ನೋಟರಿ ಪ್ರತಿ

ನಿಪಿ-3 : ಎದುರುದಾರರ ಆಧಾರ ಗುರುತಿನ ಪತ್ರದ ನೋಟರಿ ಪ್ರತಿ

ನಿಪಿ-4 : ಪಡಿತರ ಚೀಟಿಯ ನೋಟರಿ ಪ್ರತಿ

ನಿಪಿ-5 : 1 ನೇ ಅರ್ಜಿದಾರರ ಚುನಾವಣಾ ಗುರುತಿನ ಚೀಟಿಯ ನೋಟರಿ ಪ್ರತಿ

<u>3. ಎದುರುದಾರರ ಪರ ವಿಚಾರಣೆಯಾದ ಸಾಕ್ಷಿದಾರರ ಪಟ್ಟಿ:</u>

ಆರ್.ಡಬ್ಲ್ಯೂ-1 : ಗಂಗಪ್ಪ

<u>4. ಎದುರುದಾರರ ಪರ ನಿಶಾನೆಯಾಗಿ ಗುರುತಿಸಿಕೊಂಡ ದಾಖಲೆಗಳುಃ</u>

-ಇಲ್ಲಾ-

( ಪ್ರಸನ್ನಕುಮಾರ್ ಸಿ. )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ